ನೀವು ತಿಳಿದಿರಾ? ನಾವು ಮಲಯಾಳಿಗಳು – ಬರೀ ಕೈಕಾಲು ಎರಡನ್ನು ಮಾತ್ರ ತೆಗೆದುಕೊಂಡು ಊರುಬಿಟ್ಟ ನಮ್ಮ ನಾಡಿನ ಸಾವಿರಾರು ಜನರು – ಈ ಜಗತ್ತಿನಾದ್ಯಂತ ನಾನಾ ಬಗೆಯ ಉದ್ಯೋಗ ಮಾಡುತ್ತಿದ್ದಾರೆ, ಗೊತ್ತುಂಟಲ್ಲ? ಆ ಮೂರ್ಖರು ಪ್ರತಿವರ್ಷವೂ ಸೀಸನ್ನಿಗೆ ಊರಿಗೆ ಬಂದು ತೆಯ್ಯಮ್ ನೋಡಿ ಹೋಗುತ್ತಾರೆ ಗೊತ್ತುಂಟ?' ಎಂದು ಜೋರಾಗಿ ನಕ್ಕರು! ಬಳಿಕ ಕಣ್ಣು ಮಿಟುಕಿಸುತ್ತ ಬೇರೆ ದನಿಯಲ್ಲಿ ಮುಂದುವರೆಸಿದರು – 'ಅಥವಾ ಹೀಗೂ ಕೇಳಬಹುದು – ಇದು ಸುಳ್ಳೇ ಆಗಿದ್ದ ಪಕ್ಷದಲ್ಲಿ, ಈ ಪ್ರದರ್ಶನಗಳನ್ನು ರೆಕಾರ್ಡ್ ಮಾಡಿ ಡೆಲ್ಲಿಗೆ ಕೊಂಡೊಯ್ದು ಇಟ್ಟುಕೊಂಡಿರುವ ಸಂಗೀತ ನಾಟಕ ಅಕಾಡೆಮಿಯವರೂ ಮೂರ್ಖರಾದರಲ್ಲವೆ? ಮತ್ತೀಗ ಅದನ್ನು ನೋಡಬೇಕು ಅಂತ ಬಂದಿರುವ ನೀವೂ ಮೂರ್ಖರೆಂದೇ ಆಯಿತಲ್ಲ?!'

ಏನು ಹೇಳಲೂ ತೋಚದೆ ನಾವು ಸುಮ್ಮನೆ ಕೂತಿದ್ದೆವು. ತಟ್ಟನೆ, ಗೋಪಾಲನ್ ಹೊಸತೇನೋ ಹೊಳೆದವರಂತೆ ಉತ್ಸಾಹಗೊಂಡು ಬೇರೆಯೇ ವರಸೆಗೆ ತಿರುಗಿಕೊಂಡರು – 'ಐ ವಿಲ್ ನವ್ ಗಿವ್ ಯೂ ಎನ್ ಏಕ್ಸ್ಯಾಂಪಲ್' ಅನ್ನುತ್ತ, ಕಾರಿನ ಎರಡೂ ಹಿನ್ನೋಟದ ಕನ್ನಡಿಗಳನ್ನು ನಮ್ಮ ಮುಖದತ್ತ ತಿರುಗಿಸಿ ನಗುತ್ತ ಕೇಳಿದರು – 'ಈಗ ಇದರಲ್ಲಿ ನೋಡಿ, ಏನು ಕಾಣುತ್ತಿದೆ? ಅಲ್ಲಿ ರಸ್ತೆಯ ಮೇಲೆ ಹಿಂಬದಿಯಿಂದ ಒಂದು ಕಾರು ಬರುತ್ತಾ ಇದೆ. ಇದು ಸತ್ಯವೋ ಸುಳ್ಳೋ? ಸುಳ್ಳಂತೂ ಅಲ್ಲ; ಯಾಕಂದರೆ ಈ ಕನ್ನಡಿ ಸುಳ್ಳು ವಾಹನಗಳನ್ನು ತೋರಿಸುವುದಾಗಿದ್ದರೆ, ಈ ಕಾರಿನ ಕಂಪನಿಯವರು ಈ ಕನ್ನಡಿ ಹಾಕುತ್ತಲೂ ಇರಲಿಲ್ಲ; ನಾವದನ್ನು ನೋಡುತ್ತಲೂ ಇರಲಿಲ್ಲ. ಅಲ್ಲವಾ? ಹಾಗಾದರೆ, ಕನ್ನಡಿಯೊಳಗೆ ಕಾಣುವ ಈ ಕಾರು ನಿಜವೋ? ಅದೂ ಅಲ್ಲ. ಯಾಕಂದರೆ, ಕನ್ನಡಿಯೊಳಗೆ ಕೈಹಾಕಿದರೆ ಕಾರು ನಿಮ್ಮ ಕೈಗೆ ಸಿಕ್ಕುವುದಿಲ್ಲವಲ್ಲ?!' ಗೋಪಾಲನ್ ಕಣ್ಣುಮುಚ್ಚಿಕೊಂಡೇ ತಮ್ಮ ಮಾತು ಮುಂದುವರೆಸುತ್ತಿದ್ದರು – 'ಅದನ್ನೇ... ಅದನ್ನೇ ಆದಿಶಂಕರರು ತಮ್ಮ ದಕ್ಷಿಣಾಮೂರ್ತಿಶ್ಲೋಕದಲ್ಲಿ ಹೇಳಿದ್ದು' – ಅಂದವರೆ, 'ವಿಶ್ವಂ ದರ್ಪಣದೃಶ್ಯಮಾನನಗರೀ ತುಲ್ಯಂ...' ಎಂಬ ಆ ಶ್ಲೋಕವನ್ನು

